# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| 1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1388 |
| 2) ಸದಸ್ಯರ ಹೆಸರು | : | ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| 3) ಉತ್ತರಿಸುವ ದಿನಾಂಕ | : | 18.12.2025 |
| 4) ಉತ್ತರಿಸುವವರು | : | ಮಾನ್ಯ ಮುಖ್ಯಮಂತ್ರಿಗಳು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2022-23 ರಿಂದ 2024-25ನೇ ಸಾಲಿನವರೆಗೆ ಪ್ರಸಕ್ತ ಬೆಲೆಗಳಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನ ಮತ್ತು ಶೇಕಡಾವಾರು ಬೆಳವಣಿಗೆ ದರ ಎಷ್ಟು; | 2022-23 ರಿಂದ 2024-25ನೇ ಸಾಲಿನವರೆಗೆ ಪ್ರಸಕ್ತ ಬೆಲೆಗಳಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನ ಮತ್ತು ಶೇಕಡಾವಾರು ಬೆಳವಣಿಗೆ ದರದ ವಿವರಗಳು ಕೆಳಕಂಡಂತಿದೆ.<br><br>ವರ್ಷ / ರಾಜ್ಯದ ಆಂತರಿಕ ಉತ್ಪನ್ನ (ಕೋಟಿಗಳಲ್ಲಿ) / ಬೆಳವಣಿಗೆ ದರ<br>2022-23 / 23,19,696 / 16.4%<br>2023-24 / 25,57,241 / 10.2%<br>2024-25 / 28,83,903 / 12.8% |
| ಆ) | 2022-23ನೇ ಸಾಲಿನಿಂದ ಇಲ್ಲಿಯವರೆಗೆ ರಾಜ್ಯ ಸರ್ಕಾರ ಪಡೆದ ಆಂತರಿಕ ಮತ್ತು ಬಾಹ್ಯ ಸಾಲಗಳ ಮೊತ್ತವೆಷ್ಟು; ಸದರಿ ಸಾಲಿನಲ್ಲಿ ಮರು ಪಾವತಿ ಮಾಡಿದ ಸಾಲದ ಮೊತ್ತವೆಷ್ಟು; ಯಾವ ಉದ್ದೇಶಗಳಿಗೆ ಸದರಿ ಸಾಲವನ್ನು ಪಡೆಯಲಾಗಿದೆ; ಇತ್ತೀಚಿನ ಎರಡು ವರ್ಷಗಳಿಂದ ಸರ್ಕಾರ ಪಡೆದ ಸಾಲಗಳಿಗೆ ಖಾತರಿ ನೀಡಿದ ವಿವರಗಳನ್ನು ನೀಡುವುದು; | 2022-23ನೇ ಸಾಲಿನಿಂದ ಇಲ್ಲಿಯವರೆಗೆ ರಾಜ್ಯ ಸರ್ಕಾರ ಪಡೆದ ಆಂತರಿಕ ಮತ್ತು ಬಾಹ್ಯ ಸಾಲ ಹಾಗೂ ಮರುಪಾವತಿಯ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.<br><br>ರಾಜ್ಯ ಸರ್ಕಾರವು ಪಡೆಯುವ ಸಾಲವನ್ನು ಬಂಡವಾಳ ಕಾಮಗಾರಿಗಳಿಗೆ ಅನುದಾನ ಒದಗಿಸಲು ಹಾಗೂ ಸರ್ಕಾರವು ಹಿಂದಿನ ವರ್ಷಗಳಲ್ಲಿ ಮಾಡಿರುವ ಸಾಲಗಳ ಮರುಪಾವತಿ ಮಾಡಲು ಮತ್ತು ರಾಜಸ್ವ ಕೊರತೆ ಉಂಟಾದರೆ ಅದನ್ನು ಭರಿಸಲು ವಿನಿಯೋಗಿಸಲಾಗುತ್ತದೆ.<br><br>ಸರ್ಕಾರವು ಪಡೆಯುವ ಸಾಲಗಳಿಗೆ ಯಾವುದೇ ಖಾತರಿಗಳಿರುವುದಿಲ್ಲ. |
| ಇ) | ರಾಜ್ಯದ 2024-25ನೇ ಸಾಲಿನ ಒಟ್ಟು ಆದಾಯದಲ್ಲಿ ಮೊದಲ 05 ಶ್ರೇಯಾಂಕಿತ ಜಿಲ್ಲೆಗಳು ಯಾವುವು; | 2024-25ನೇ ಸಾಲಿನ ರಾಜ್ಯದ ತಲಾದಾಯದ ವಿವರಗಳು ಲಭ್ಯವಿರುವುದಿಲ್ಲ. 2023-24ನೇ ಸಾಲಿನ ತಲಾದಾಯದ ವಿವರಗಳು ಲಭ್ಯವಿದ್ದು, ಅದರಂತೆ ರಾಜ್ಯದ ಮೊದಲ 05 ಶ್ರೇಯಾಂಕಿತ ಜಿಲ್ಲೆಗಳು ಕೆಳಕಂಡಂತಿದೆ.<br>1. ಬೆಂಗಳೂರು ನಗರ<br>2. ದಕ್ಷಿಣ ಕನ್ನಡ<br>3. ಉಡುಪಿ<br>4. ಚಿಕ್ಕಮಗಳೂರು<br>5. ಬೆಂಗಳೂರು ಗ್ರಾಮಾಂತರ |

<table>
<tr>
<td>ಈ)</td>
<td>2022-23ನೇ ಸಾಲಿನಿಂದ ಇಲ್ಲಿಯವರೆಗೆ ಸರ್ಕಾರದ ವಿವಿಧ ಇಲಾಖೆಯಡಿ ಸೇವೆ ಸಲ್ಲಿಸುತ್ತಿರುವ ಗುತ್ತಿಗೆ, ಹೊರಗುತ್ತಿಗೆ ನೌಕರರಿಗೆ ಪಾವತಿಸಿದ ಸಂಬಳದ ಮೊತ್ತವೆಷ್ಟು; ಆರ್ಥಿಕ ವರ್ಷವಾರು ಮಾಹಿತಿ ನೀಡುವುದು;</td>
<td>2022-23ನೇ ಸಾಲಿನಿಂದ ಇಲ್ಲಿಯವರೆಗೆ ಸರ್ಕಾರದ ವಿವಿಧ ಇಲಾಖೆಯಡಿ ಸೇವೆ ಸಲ್ಲಿಸುತ್ತಿರುವ, ಹೊರಗುತ್ತಿಗೆ ನೌಕರರಿಗೆ ಪಾವತಿಸಿದ ಸಂಬಳದ ವಿವರಗಳು ಕೆಳಕಂಡಂತಿದೆ.
<table>
<tr><th>ವರ್ಷ</th><th>ಗುತ್ತಿಗೆ/ ಹೊರಗುತ್ತಿಗೆ ನೌಕರರಿಗೆ ಭರಿಸಿದ ವೇತನ (ರೂ.ಕೋಟಿಗಳಲ್ಲಿ)</th></tr>
<tr><td>2022-23</td><td>2,069</td></tr>
<tr><td>2023-24</td><td>2,258</td></tr>
<tr><td>2024-25</td><td>2,385</td></tr>
<tr><td>2025-26 ನವೆಂಬರ್ ವರೆಗೆ</td><td>2,664</td></tr>
</table>
</td>
</tr>
<tr>
<td>ಉ)</td>
<td>ರಾಜ್ಯ ಸರ್ಕಾರದ ಗ್ಯಾರೆಂಟಿ ಯೋಜನೆಗಳ ಅನುಷ್ಠಾನದ ವಿವಿಧ ಹಂತಗಳ ಸಮಿತಿಯ ಅಧ್ಯಕ್ಷರು ಮತ್ತು ಇತರ ಸದಸ್ಯರುಗಳಿಗೆ 2023-24ನೇ ಸಾಲಿನಿಂದ ಇಲ್ಲಿಯವರೆಗೆ ಬಿಡುಗಡೆ ಮಾಡಲಾದ ಮತ್ತು ಪಾವತಿಸಲಾದ ಗೌರವ ಧನದ ಮೊತ್ತವೆಷ್ಟು;</td>
<td>ರಾಜ್ಯ ಸರ್ಕಾರದ ಗ್ಯಾರೆಂಟಿ ಯೋಜನೆಗಳ ಅನುಷ್ಠಾನದ ವಿವಿಧ ಹಂತಗಳ ಸಮಿತಿಯ ಅಧ್ಯಕ್ಷರು ಮತ್ತು ಇತರ ಸದಸ್ಯರುಗಳಿಗೆ ಸಮಿತಿ ರಚನೆಯಾದಾಗಿನಿಂದ ಇಲ್ಲಿಯವರೆಗೆ ಬಿಡುಗಡೆ ಮಾಡಲಾದ ಗೌರವ ಧನ ಮತ್ತು ಸಭಾ ಭತ್ಯೆಯ ವಿವರಗಳು ಕೆಳಕಂಡಂತಿದೆ.
(ರೂ.ಲಕ್ಷಗಳಲ್ಲಿ)
<table>
<tr><th>ಪದಾಧಿಕಾರಿಗಳು</th><th>ನವೆಂಬರ್ 2025 ರ ಅಂತ್ಯದವರೆಗೆ</th></tr>
<tr><td>ರಾಜ್ಯ</td><td>221.99</td></tr>
<tr><td>ಜಿಲ್ಲೆ</td><td>526.80</td></tr>
<tr><td>ತಾಲ್ಲೂಕು</td><td>2,512.16</td></tr>
<tr><td>ಬಿ.ಬಿ.ಎಂ.ಪಿ</td><td>142.00</td></tr>
<tr><td>ಒಟ್ಟು</td><td>3,402.95</td></tr>
</table>
</td>
</tr>
</table>

**ಸಂಖ್ಯೆ: FD/134/2025-DS-BR-FINANCE DEPT.SEC**

(ಸಿದ್ದರಾಮಯ್ಯ)
ಮುಖ್ಯಮಂತ್ರಿ